# ಛತ್ರಪತಿ ಶಿವಾಜಿ 1627-1680 A.D

1. ಪೀಠಿಕೆ
2. ಪ್ರಾರಂಭಿಕ ಜೀವನ
3. ಅವನ ಮಹತ್ವಕಾಂಕ್ಷೆ
4. ಪ್ರಾರಂಭಿಕ ಸಾಧನೆಗಳು.
   1. ಸೈನಿಕ ಸಂಘಟನೆ.
   2. ಸಂಪನ್ಮೂಲಗಳ ಸಂಗ್ರಹ.
   3. ಸ್ಥಾನಿಕ ಕೋಟೆಗಳ ವಶ
5. ವಿಜಾಪೂರದ ಆದಿಲ್‌ಷಾಹಿ ಸುಲ್ತಾನರೊಡನೆ ಹೋರಾಟಗಳು.
   1.) ಪುರಂದರ ಕದನ.(ಸಹಿಸ್ತಾ
   2.) ಪ್ರತಾಪಗಡ ಕದನ (ಅಫಜಲ್‌ಖಾನ)
   3.) ಕೊಲ್ಲಾಪುರ ಕದನ
6. ಮೊಘಲ್‌ರೊಡನೆ ಸಂಘರ್ಸಗಳು.
   - ಮೊಘಲ ಗಡಿ ಪ್ರದೇಶಗಳ ಮೇಲೆ ಪ್ರಾರಂಭಿಕ ದಾಳಿಗಳು.(1656)
   - ಶಾಹಿಸ್ತಖಾನನನ್ನು ಹಿಮ್ಮೆಟ್ಟಿಸಿದ್ದು. (1660-63)
   - ಸೂರತ್‌ನಗರದ ಮುತ್ತಿಗೆ.(1664)
   - ಜಯಸಿಂಗನ ದಾಳಿ ಮತ್ತು ಪುರಂದರ ಒಪ್ಪಂದ (1665)
   - ಆಗ್ರಾದ ಭೇಟಿ. ಬಂಧನ ಮತ್ತು ಬಂಧನದಿಂದ ಪಾರು (1666)
   - ಮೊಘಲರೊಂದಿಗೆ ಮತ್ತೆ ಸಂಘರ್ಷ(1666-1670)
7. ಶಿವಾಜಿಯ ಸಿಂಹಾಸನರೋಹಣ (1674)
8. ಶಿವಾಜಿಯ ಕರ್ನಾಟಕದ ಮೇಲೆ ದಾಳಿಗಳು.(1677)

9 ಶಿವಾಜಿಯ ಆಡಳಿತ ಪದ್ದತಿ.

10. ಕೊನೆಯ ದಿನಗಳು ಮತ್ತು ಮರಣ.1680
11. ವ್ಯಕ್ತಿತ್ವ ಮತ್ತು ವಿಮರ್ಶೆ

**1. ಪೀಠಿಕೆ**

ವಿಜಯನಗರ ಸಾಮ್ರಾಜ್ಯ ಪತನದ ನಂತರ ಮತ್ತೊಮ್ಮೆ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಶಿವಾಜಿಗೆ ಸಲ್ಲುತ್ತದೆ. ಪ್ರಜಾಹಿತ ರಕ್ಷಕ, ಹಿಂದುತ್ವ ರಕ್ಷಕ, ರಾಷ್ಟ್ರ ಪ್ರೇಮಿ, ನ್ಯಾಯವಂತನಾದ ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ಧರ್ಮಕ್ಕೆ ರಾಜಸಿಂಹಾಸನ ದೊರಕಿಸಿ ಕೊಟ್ಟದ್ದು ಅವಿಸ್ಮರಣಿಯ. ಒಂದು ಕಡೆ ಬಿಜಾಪುರದ ಆದಿಲ್‌ಷಾಹಿ ಸುಲ್ತಾನರೊಡನೆ, ಇನ್ನೊಂದು ಕಡೆ ಮೊಘಲ್‌ರ ಔರಂಗಜೇಬರೊಡನೆ ಹೋರಾಡುತ್ತಾ ಹಿಂದು ಷಾಹಿ ಸ್ವರಾಜ್ಯವನ್ನು ಕಟ್ಟಿ , ಬೆಳಿಸಿದ ಶಿವಾಜಿಯ ಸಹಾಸಮಯ ಹೋರಾಟಗಳು ರೋಮಾಂಚನವಾಗಿದೆ.

**2. ಪ್ರಾರಂಭಿಕ ಜೀವನ**

ಕ್ರಿ.ಶ.1627 ರಲ್ಲಿ ಶಿವಾಜಿಯು ಪುಣೆಯ ಶಿವನೇರಿ ದುರ್ಗ ಎಂಬಲ್ಲಿ ಜನಿಸಿದನು. ಇವರ ತಂದೆ ಷಹಾಜಿ ಭೋಂಸ್ಲೆ ತಾಯಿ ಜೀಜಾಬಾಯಿ. ಇತನ ತಂದೆಯು ಬಿಜಾಪುರ ಸುಲ್ತಾನನ ಬಳಿ ಉನ್ನತ ಹುದ್ದೆಯಲ್ಲಿದ್ದರಿಂದ ತಾಯಿ ಜೀಜಾಬಾಯಿ ಇವನ ಭವಿಷ್ಯ ರೂಪಿಸಿದರು. ತಂದೆಯ ಪ್ರೀತಿಯನ್ನು ಪಡೆಯುವಲ್ಲಿ ವಂಚಿತನಾದನು. ಯಾಕಂದರೆ ಷಹಾಜಿಯು ತುಕಾಬಾಯಿಯನ್ನು ಎರಡನೆ ಮದುವೆಯಾಗಿ ಬೆಂಗಳೂರಿಗೆ ಬಂದು ನೆಲಸಿದ್ದನು. ಇದರಿಂದ ಈತನ ಜೀವನ ರೂಪಿಸುವಲ್ಲಿ ತಾಯಿ ಜಿಜಾಬಾಯಿ ಪಾತ್ರ ಮಹತ್ವದಾಗಿದೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನವಿದ್ದ ಈಕೆ ರಾಮಾಯಣ ಮಹಾಭಾರತ, ಪುರಾಣದ ಕಥೆಗಳನ್ನು ಹೇಳಿ ಶಿವಾಜಿಯಲ್ಲಿ ಸ್ವಧರ್ಮದ ಬಗ್ಗೆ ಗೌರವ ಮತ್ತು ಅಭಿಮಾನ ಹೆಚ್ಚಿಸಿದಳು. ಶಿವಾಜಿಗೆ ಗುರು ಕೊಂಡದೇವರು ರಾಜನೀತಿ, ಯುದ್ಧ ಕೌಶಲ್ಯ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಮಾರ್ಗದರ್ಶನವಿತ್ತರು. ಗುರು ರಾಮದಾಸರು ಶಿವಾಜಿಗೆ ಸ್ವಧರ್ಮಾಭಿಮಾನ ಮತ್ತು ರಾಷ್ಟ್ರಭಕ್ತಿಯನ್ನು ಹೆಚ್ಚಿಸಿದರು.

**3. ಅವನ ಮಹತ್ವಕಾಂಕ್ಷೆ**

ಗುರು ಕೊಂಡದೇವನು ಈತನನ್ನು ಬಿಜಾಪುರದ ಆಸ್ಥಾನದಲ್ಲಿ ಸೇವೆಗೆ ಸೇರಿಸಲು ಆಸೆ ಪಟ್ಟದ್ದನು. ಸ್ವಧರ್ಮ ರಕ್ಷಣೆ ಮತ್ತು ಸ್ವರಾಜ್ಯದ ಸ್ಥಾಪನೆಗಾಗಿ ಕುದಿಯುತ್ತಿದ್ದ ಈತನ ಬಿಸಿರಕ್ತ ಈ ಸಲಹೆಯನ್ನು ತಿರಸ್ಕರಿಸಿತು. ತಾನು ವಾಸಿಸುತ್ತಿದ್ದ ನೆಲ, ಜಲ, ಭೌಗೋಳಿಕ, ಪರಿಸರ, ಸಹಧರ್ಮಿಯರ ನೋವುಗಳು, ಪರಕೀಯರ ದಬ್ಬಾಳಿಕೆಗಳು, ತನ್ನ ಧರ್ಮದ ಮೇಲೆ ಆಗುತ್ತಿದ್ದ ಅನ್ಯಾಯ ಮತ್ತು ಅಧರ್ಮದ ವಿರುದ್ಧ ಸಿಡಿದೇಳವ ಗುರಿಯನ್ನು ತನ್ನದಾಗಿಸಿಕೊಂಡು ಯೋಜನೆ ರೂಪಿಸಲಾರಂಬಿಸಿದನು.

**4. ಪ್ರಾರಂಬಿಕ ಸಾಧನೆಗಳು.**

ಶಿವಾಜಿಯು ತನ್ನ ಶಿಕ್ಷಣವನ್ನು ಪಡೆದುಕೊಂಡ ಮೇಲೆ, ವೃತ್ತಿ ಜೀವನ ಆರಂಬಿಸುವ ಮುನ್ನ ತನ್ನ ತಂದೆ ಷಹಾಜಿಯನ್ನು ಕಾಣಲು ಬೆಂಗಳೂರಿಗೆ ಬಂದಿದ್ದನು. ಈ ಸಂದರ್ಭದಲ್ಲಿ ಹಿಂದೂ ಸಾಮ್ರಾಜ್ಯವಾದ ವಿಜಯನಗರದ ರಾಜಧಾನಿ ಹಂಪೆಯನ್ನು ಸಂದರ್ಶಿಸಿ, ಹಿಂದೂ ಸಾಮ್ರಾಜ್ಯವನ್ನು ಮತ್ತೊಮ್ಮೆ ಕಟ್ಟಲು ಪ್ರೇರಣೆ ಪಡೆದನು. ಶ್ರೀಶೈಲ ಭೇಟಿ ನೀಡಿ ಮಲ್ಲಿಕಾರ್ಜುನ ದೇವಾಲಯ್ ಹೆಬ್ಬಾಗಿಲಿನ ಮೇಲೆ ಗೋಪುರ ಕಟ್ಟಿಸಿದನು. ತುಳಜಾಪುರದ ಭವಾನಿಯ ಭಕ್ತನಾಗಿದ್ದು ಶಕ್ತಿದೇವಿಯ ಆಶಿರ್ವಾದ ಪಡೆದನು.

- ಸೈನಿಕ ಸಂಘಟನೆ.
  - ಮುಸ್ಲೀಮ್ ದಾಳಿಕೋರರಿಂದ ಹಿಂದು ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಣೆಯ ಯೋಜನೆಗಳನ್ನು ನಿಯೋಜಿಸಿಕೊಂಡು ಗುಡ್ಡಗಾಡಿನ ಸಹ್ಯಾದ್ರಿಯ ತಪ್ಪಲಿನಲ್ಲಿ ಚದುರಿದ ಮಾವಳಿಗಳನ್ನು ಒಂದು ಗೂಡಿಸಿ ಪಡೆಯೊಂದನ್ನು ನಿರ್ಮಿಸಿದನು. ಗೊರಿಲ್ಲಾ ಯುದ್ಧಕಲೆಯಲ್ಲಿ ನಿಪುಣರಾಗಿದ್ದ ಇವರನ್ನು ಇನ್ನಷ್ಟು ತರಬೇತಿ ನೀಡಿ ವ್ಯವಸ್ಥಿತವಾದ ಸೈನ್ಯವನ್ನು ಸಂಘಟಿಸಿದನು.
- ಸಂಪನ್ಮೂಲಗಳ ಸಂಗ್ರಹ. ಶಿವಾಜಿಯು ತನ್ನ 16 ನೇಯ ವಯಸ್ಸಿನಲ್ಲಿ ತಾನು ಸಂಘಟಿಸಿ ಪಡೆಯಿಂದ, ಹಿಂದೂಗಳನ್ನು ಹಿಂಸೆ ನೀಡುತ್ತಿದ್ದ ಮುಸ್ಲೀಮ್ ಸರದಾರರನ್ನು, ಜಹಗೀರುದಾರರನ್ನು ಮುಸ್ಲೀಮ್ ವ್ಯಾಪಾರಸ್ಥರನ್ನು ಲೂಟಿ ಮಾಡಿ ಪಡೆದ ಸಂಪತ್ತನ್ನು ಬಡ ಮಾವಳಿಜನರಿಗೆ ಹಂಚುತ್ತದ್ದನು. ಇದರಿಂದ ಇವನ ಕೀರ್ತಿ ಮತ್ತು ಸೈನ್ಯಬಲ ಹೆಚ್ಚಿತು.
- ಸ್ಥಾನಿಕ ಕೋಟೆಗಳ ವಶ ತನ್ನ ಬಲ ಹೆಚ್ಚಿಸಿಕೊಂಡ ಶಿವಾಜಿಯು ತನ್ನ ಸುತ್ತಮುತ್ತಲಿನ ಕೋಟೆಗಳತ್ತ ಗಮನ ಹರಿಸಿದನು. ಬಿಜಾಪುರದ ಆದಿಲ್‌ಷಾಹಿ ಸುಲ್ತಾನ ಅನಾರೋಗ್ಯದಿಂದ ಬಳಲುತ್ತಿದ್ದನು. ಇದರ ಲಾಭ ಪಡೆದ ಶಿವಾಜಿಯು ಮೊದಲು ತೋರಣದುರ್ಗದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು. ಅಲ್ಲಿ ದೊರೆತ ಅಪಾರ ಸಂಪತ್ತನಿಂದ ತನ್ನ ಸೈನ್ಯವನ್ನು ಇಮ್ಮಡಿಗೊಳಿಸಿ, ರಾಯಗಡ, ಪ್ರತಾಪಗಡ, ಸಿಂಹಗಡ, ಗೋಂಡಾವನ ಮತ್ತು ಪುರಂದರ ಕೋಟೆಗಳನ್ನು ವಶಪಡಿಸಿಕೊಂಡನು.

**5. ವಿಜಾಪೂರದ ಆದಿಲ್‌ಷಾಹಿ ಸುಲ್ತಾನರೊಡನೆ ಹೋರಾಟಗಳು.**

**1.) ಪುರಂದರ ಕದನ.**

ಶಿವಾಜಿಯ ಚಟುವಟಿಕೆಗಳಿಂದ ಕ್ರೊದಗೊಂಡ ಬಿಜಾಪುರದ ಸುಲ್ತಾನ ಮಹಮದ್ ಆದಿಲ್‌ಷಾಹಿಯು ಫತೇಹ್‌ಖಾನನ ನೇತೃತ್ವದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿದನು. ಇವನು ಪುರಂದರ ಕೋಟೆಯನ್ನು ಮುತ್ತಿಗೆ ಹಾಕಿದನು. ಇನ್ನೊಂದಡೆ ಶಿವಾಜಿಯ ತಂದೆ ಷಹಾಜಿಯನ್ನು ಮತ್ತು ಸಹೋದರ ಸಾಂಬಾಜಿಯನ್ನು ಬಂದಿಸಿ ಸೆರೆಮನೆಗೆ ಹಾಹಿದನು. ಇದರಿಂದ ಶಿವಾಜಿಯು ಅತ್ಯಂತ ಚತುರತೆಯಿಂದ ಮತ್ತು ಜಾಗ್ರತಿಯಿಂದ ವರ್ತಿಸಿದನು. ಈ ಸಮಯದಲ್ಲಿ ಮೊಘಲ್ ಬಾದ್‌ಷಹಾ ಔರಂಗಜೇಬನ ಮಗ ಮುರಾದ ಭಕ್ಷ ಬಿಜಾಪುರದ ಮೇಲೆ ದಾಲಿ ಮಾಡಲು ದಕ್ಷಿಣಕ್ಕೆ ಬಂದಿದ್ದನು. ಇದನ್ನು ತಿಳಿದ ಶಿವಾಜಿಯು " ನೀನು ನನ್ನ ತಂದೆ ಮತ್ತು ಸಹೋದರನ್ನು ಬಿಡುಗಡೆ ಮಾಡದಿದ್ದರೆ, ನಾನು ನನ್ನ ಆಧೀನದಲ್ಲಿದ್ದ ಕೋಟೆ ಮತ್ತು ಸೈನ್ಯ ಸಮೇತನಾಗಿ ಮೊಘಲರ ಆಧೀನಕ್ಕೆ ಹೊಗುತ್ತೆನೆ " ಎಂದು ಬೆದರಿಕೆ ಹಾಕಿದನು. ಇದರಿಂದ ದಿಗ್ಭ್ರಮೆಗೊಂಡ ಬಿಜಾಪುರ ಸುಲ್ತಾನ ಶಿವಾಜಿಯೊಂದಿಗೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಶಿವಾಜಿಯು ಸುಲ್ತಾನನಿಗೆ ವಿಧೇಯನಾಗಿರುವದಾಗಿ ಒಪ್ಪಿ ತಂದೆ ಮತ್ತು ಸಹೋದರನನ್ನು ಜಾಣತನದಿಂದ ವಿಮುಕ್ತ ಮಾಡಿಸಿದನು.

**2.) ಪ್ರತಾಪಗಡ ಕದನ (ಅಫಜಲ್‌ಖಾನ)**

ಬಿಜಾಪುರ ಸುಲ್ತಾನನೊಡನೆ ಒಪ್ಪಂದ ಮಾಡಿಕೊಮಡ ಮೇಲೆ ಆರು ವರ್ಷ ಬಿಜಾಪುರದ ಸುಲ್ತಾನನ ಯಾವುದೇ ಗಡಿ ಪ್ರದೇಶಗಳ ಮೇಲೆ ದಾಳಿ ಮಾಡಲಿಲ್ಲ. ಈ ಸಮಯದಲ್ಲಿ ಔರಂಗಜೇಬನು ವಾಯ್ಯುದ ಮತ್ತು ಪೌರತ್ಯದ ಯುದ್ಧಗಳಲ್ಲಿ ತೋಡಗಿದ್ದರಿಂದ ಶಿವಾಜಿಯು ಮೊಘಲ್ ಕೋಟೆಗಳನ್ನು ಮತ್ತು ಗೋಲ್ಕಂಡದ ಕೋಟೆಗಲನ್ನು ವಶಪಡಿಸಿಕೊಂಡನು. ಇವನ ವಿಶಾಲ ರಾಜ್ಯದ ಮೇಲೆ ನಿಯಂತ್ರಣ ಹೊಂದಬೇಕಾದರೆ, ಬಿಜಾಪುರದ ಆಧಿನದಲ್ಲಿದ್ದ ಮತ್ತು ಆಯಕಟ್ಟಾದ ಸ್ಥಳದಲ್ಲಿದ್ದ ಜವಳಿ ಕೋಟೆನ್ನು ವಶಪಡಿಸಿಕೊಂಡನು. ಇದರಿಂದ ಕ್ರೊದಗೊಂಡ ಆದಿಲ್‌ಷಾಹಿ ಶಿವಾಜಿಯ ಸೊಕ್ಕನ್ನು ಮುರಿಯಲು ಅತ್ಯಂತ ಬಲಶಾಲಿಯಾದ ಆಫಜಲ್‌ಖಾನನ ನೇತೃತ್ವದಲ್ಲಿ ಪ್ರತಾಪಗಡ ಮುತ್ತಿಗೆ ಹಾಕಿದನು. ನೇರವಾಗಿ ಶಿವಾಜಿಯನ್ನು ಎದುರಿಸಲಾಗದ ಖಾನ ಕೃಷ್ಣಾಜಿ ಭಾಸ್ಕರ ಎಂಬುವನ ಮೂಖಾಂತರ ಪ್ರತ್ಯೇಕವಾಗಿ ಮಾತುಕತೆಗೆ ಭೇಟಿಮಾಡುವ ನಟನಾ ತಂತ್ರ ಹೂಡಿ ಬಂಧಿಸಲೆತ್ನಿಸಿದನು. ಆದರೆ ಇದನ್ನರಿತ ಶಿವಾಜಿಯು ರಹಸ್ಯವಾಗಿಟ್ಟುಕೊಂಡ "ವ್ಯಾಘ್ರನಖ " ಎಂಬ ಆಯುಧದಿಂದ ಅಫಜಲ್‌ಖಾನನನ್ನು ಕೊಂದನು. ಇದರಿಂದ ಬಿಜಾಪುರದ ಸೈನ್ಯ ದಿಕ್ಕಾಪಾಲಾಗಿ ಪಲಾಯನ ಮಾಡಿತು.

**3.) ಕೊಲ್ಲಾಪುರ ಕದನ**

ಆಫಜಲ್‌ಖಾನನ ಮರಣದ ಸುದ್ದಿ ಬಿಜಾಪುರದ ಸುಲ್ತಾನನಿಗೆ ಅವಮಾನವನ್ನು ಉಂಟು ಮಾಡಿತು. ಇದರಿಂದ ಇನ್ನಷ್ಟು ಕ್ರೊದಗೊಂಡ ಸುಲ್ತಾನ ತನ್ನ ಅವಮಾನದ ಸೇಡನ್ನು ತಿರಿಸಿಕೊಳ್ಳಲು ಆಭಿಸೇನಿಯಾದ ಸಮರ್ಥನಾದ ರುಸ್ತುಮ್‌ಝುಮಾನ ದಂಡನಾಯಕತ್ವದಲ್ಲಿ ಇನ್ನೊಂದು ಪಡೆಯನ್ನು ಕೊಲ್ಲಾಪುರದ ಮುತ್ತಿಗೆಗೆ ಕಳುಹಿಸಿದನು. ಈ ಪಡೆಯು ಒಂದು ವರ್ಷದವರೆಗೂ ಯುದ್ಧ ಮಾಡಿದರೂ ಶಿವಾಜಿಯನ್ನು ಬಂಧಿಸಲಾಗಲಿಲ್ಲ. ಕೊನೆಗೆ ಬಿಜಾಪುರದ ಸುಲ್ತಾನನೇ ಶಿವಾಜಿಯೋಂದಿಗೆ ಒಪ್ಪಂದ ಮಾಡಿಕೊಂಡು ಅವನನ್ನು ಮರಾಠರ ಸ್ವತಂತ್ರ ಅರಸನೆಂದು ಮನ್ನಣೆ ಮಾಡ ಗೌರವಿಸಿದನು.

6. ಮೊಘಲ್‌ರೊಡನೆ ಸಂಘರ್ಷಗಳು.

• ಮೊಘಲ ಗಡಿ ಪ್ರದೇಶಗಳ ಮೇಲೆ ಪ್ರಾರಂಬಿಕ ದಾಳಿಗಳು.(1656)

ಮೊಘಲ್ ಬಾದಷಹಾ ಔರಂಗಜೇಬನು ಸಿಂಹಾಸನಕ್ಕಾಗಿ ಹೊರಾಡುತ್ತಿರುವಾಗ ಶಿವಾಜಿಯು ಮೊಘಲ್‌ರ ಗಡಿಪ್ರದೇಶಗಳಾದ ಅಹಮದನಗರ, ಚುನ್ನಾರ, ಕಲ್ಯಾಣ, ಭೀವಂಡಿ, ಮಾಹುಲ, ಮತ್ತು ಕೊಂಕಣದ ಮೇಲೆ ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡನು.

• ಶಾಹಿಸ್ತಖಾನನನ್ನು ಹಿಮ್ಮೆಟ್ಟಿಸಿದ್ದು. (1660-63)

ಔರಂಗಜೇಬನು ಶಿವಾಜಿಯನ್ನು ಹತ್ತಿಕ್ಕಲು ಶಾಹಿಸ್ತಖಾನನನ್ನು ದಕ್ಷಿಣದ ಸುಭೆದಾರನಾಗಿ ನೇಮಕ ಮಾಡಿ ದೊಡ್ಡ ಸೈನ್ಯದೊಂದಿಗೆ ದಕ್ಷಿಣಕ್ಕೆ ಕಳುಹಿಸಿದನು. 1660 ರಲ್ಲಿ ಶಾಹಿಸ್ತಖಾನನು ತನ್ನ ಬಲಿಷ್ಠ ಸೈನ್ಯದೊಂದಿಗೆ ಪುಣೆ, ಕೊಂಕಣ ಕೋಟೆಗಳ ಮೇಲೆ ದಾಳಿ ಮಾಡಿ ಮರಾಠ ಸೈನ್ಯವನ್ನು ಹೊರ ಹಾಕಿ ಪುಣೆ ಲಾಲ್‌ಮಹಲ್‌ನಲ್ಲಿ ಬಿಡಾರ ಹೂಡಿದನು. 1663 ರಲ್ಲಿ ಶಿವಾಜಿಯು ಮದುವೆ ದಿಬ್ಬಣದ ವೇಷಧರಿಸಿ 400 ಸೈನೀಕರೊಂದಿಗೆ ಬಿಡಾರದ ಮೇಲೆ ದಾಳಿ ಮಾಡಿದನು. ಶಾಹಿಸ್ತಖಾನನು ಕೈಬೆರಳಗಳನ್ನು ಕಳೆದುಕೊಂಡು ತನ್ನನ್ನು ರಕ್ಷಿಸಿಕೊಳ್ಳಲು ದೆಹಲಿಗೆ ಪಲಾಯನ ಮಾಡಿದನು. ಈ ಗಲಭೆಯಲ್ಲಿ ಶಾಹಿಸ್ತಖಾನನ ಮಗ ಅಬ್ದುಲ್‌ಪತಾ, 6 ಜನ ದಳಪತಿಗಳು ಸಾವಿರಾರು ಸೈನಿಕರು ಹತರಾದರು.

• ಸೂರತ್‌ನಗರದ ಮುತ್ತಿಗೆ.(1664)

ಮೊಘಲರ ಶ್ರೀಮಂತ ರೇವು ಪಟ್ಟಣವಾದ ಸೂರತನಗರವನ್ನು 1664 ಜನವೇರಿ 20 ರಂದು ದಾಳಿ ಮಾಡಿ ಲೂಟಿ ಮಾಡಿದನು. ಈ ದಾಳಿಯಲ್ಲಿ ಶಿವಾಜಿಯು ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಅಧಿಕ ಸಂಪತ್ತನ್ನು ಪಡೆದನು. ಸೂರತನಗರವನ್ನು ಸಂಪೂರ್ಣವಾಗಿ ನಾಶ ಪಡಿಸಿದನು. ಮೊಘಲ್ ರಾಜ್ಯಪಾಲನಾದ (ಸುಭೆದಾರ) ಇನಾಯಿತ್‌ಖಾನ ರಣರಂಗದಿಂದ ಪಲಾಯನ ಮಾಡಿದನು.

• ಜಯಸಿಂಗನ ದಾಳಿ ಮತ್ತು ಪುರಂದರ ಒಪ್ಪಂದ (1665)

ಶಿವಾಜಿಯ ಎರಡು ವಿಜಯಗಳಿಂದ ಅವಮಾನಿತನಾದ ಮೊಘಲ್ ಸಾಮ್ರಾಟ ಔರಂಗಜೇಬನು ಶಿವಾಜಿಯನ್ನು "ಬೆಟ್ಟದ ಇಲಿ " ಎಂದು ಮೊದಲಿಸಿ ಅವನನ್ನು ಸದೆ ಬಡಿಯಲು ಸಮರ್ಥನಾದ ರಜಪೂತರ ಜಯಸಿಂಗನನ್ನು ದಂಡನಾಯಕನಾಗಿ ಬೃಹತ ಸೈನ್ಯದೊಂದಿಗೆ ಪೂಣೆಗೆ ಕಳುಹಿಸಿದನು. ಜಯಸಿಂಗನು ಮರಾಠರ ಒಂದೊಂದು ಕೋಟೆಗಳನ್ನು ವಶಪಡಿಕೊಳ್ಳುತ್ತ ಮರಾಠ ಸರದಾರರನ್ನು ಕೊಲ್ಲುತ್ತಾ ಮುಂದೆ ಸಾಗಿದನು ಮತ್ತು ಶಿವಾಜಿಯನ್ನು ಒಪ್ಪಂದ ಬರುವಂತೆ ಒತ್ತಾಯಿಸಿದನು. ಇದರಿಂದ ಮರಾಠ ಸರದಾರರ ಪ್ರಾಣ ಉಳಿಸಿಕೊಳ್ಳಲು ಪುರಂದರ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಶಿವಾಜಿಯು 23 ಕೋಟೆಗಳನ್ನು ಮೊಘಲರಿಗೆ ಒಪ್ಪಿಸಿದನು.

• ಆಗ್ರಾದ ಭೇಟಿ. ಬಂಧನ ಮತ್ತು ಬಂಧನದಿಂದ ಪಾರು (1666)

ಮುತ್ಸದ್ಧಿಯಾದ ಜಯಸಿಂಗನು ಶಿವಾಜಿಯನ್ನು ಇಷ್ಟಕ್ಕೆ ಬಿಟ್ಟರೆ, ಮುಂದೆ ಇವನು ಗೋಲಕೊಂಡದ ಮತ್ತು ಬಿಜಾಪುರ ಸುಲ್ತಾನರೊಡನೆ ಸೇರಿ ಮೊಘಲರ ಪ್ರದೇಶಗಳನ್ನು ಮತ್ತೆ ವಶಪಡಿಸಿಕೊಂಡು ಮೊಘಲರ ಪ್ರತಿಷ್ಠೆಗೆ ತೀವ್ರ ಆಘಾತ ಮಾಡಬಹುದೆಂದು ತಿಳಿದು ಶಿವಾಜಿಯನ್ನು ಆಗ್ರಾಕ್ಕೆ ಭೇಟಿ ನೀಡಲು ಆಮಂತ್ರಣ ನೀಡಿದನು. ಅವನ ರಕ್ಷಣೆಗೆ ವಚನವಿತ್ತನು.

ಶಿವಾಜಿಯು ತನ್ನ ಮಗ ಸಂಭಾಜಿಯೊಂದಿಗೆ ಆಗ್ರಾಕ್ಕೆ ಬಂದಳಿದನು. ಅದಕ್ಕೂ ಮುಂಚೆ 300 ಸೈನಿಕರನ್ನು ಮಾರುವೇಶದಿಂದ ಆಗ್ರಾಕ್ಕೆ ಕಳುಹಿದ್ದನು. ಆಗ್ರಾದ ಆಸ್ಥಾನದಲ್ಲಿ ಔರಂಗಜೇಬನು ಶಿವಾಜಿಯನ್ನು ಅವಮಾನಿಸಿ ಬಂಧಿಸಿ ಸೆರೆಮನೆಗೆ ಹಾಕಿದನು. ಆದರೆ ಈಗಾಗಲೆ ಬಂದಿಳಿದಿದ್ದ ಶಿವಾಜಿಯ ಸೈನೀಕರು ಉಪಾಯದಿಂದ ಶಿವಾಜಿಯನ್ನು ಮತ್ತು ಅವನ ಮಗನನ್ನು ಸರೆಮನೆಯಿಂದ ಪಾರು ಮಾಡಿದರು.

• ಮೊಘಲರೊಂದಿಗೆ ಮತ್ತೆ ಸಂಘರ್ಷ(1666-1670)

ಶಿವಾಜಿಯು ಆಗ್ರಾದಿಂದ ಪಾರಾಗಿ ಬಂದ ಮೇಲೆ ಮಘಲರಿಗೆ ಬಿಟ್ಟುಕೊಟ್ಟ ಕೋಟೆಗಳನ್ನು ಮರಳಿ ಪಡೆಯಲಾರಂಬಿಸಿದನು. ಕೊಂಡನಾ, ಪುರಂದರ, ನಂದಲ, ಬಿರಾರ್, ಖಾನದೇಶ, ಮತ್ತು ಬಗ್ಲಾ ಪ್ರಾಂತಗಳನ್ನು ವಶಪಡಿಸಿಕೊಂಡನು ಸೂರತನಗರದ ಮೇಲೆ ಮತ್ತೊಮ್ಮೆ ದಾಲಿ ಮಾಡಿ ಅಪಾರ ಸಂಪತ್ತನ್ನು ಮತ್ತೆ ಲೂಟಿ ಮಾಡಿದನು. ಮೊಘಲರ ವ್ಯಾಪಾರ ಕೇಂದ್ರಗಳನ್ನು ಪದೇ ಪದೇ ಲೂಟಿ

ಮಾಡಿದನು. ಮೊಘಲ್ ಸಾಮ್ರಾಟನು ಈತನನ್ನು ಸದೆ ಬಡಿಯಲು ಮಹಬ್ಬತ್‌ಖಾನ, ದಿಲೇರ್‌ಖಾನ, ಮತ್ತು ಬಹದ್ದೂರಖಾನರ ನೇತೃತ್ವದಲ್ಲಿ ದೊಡ್ಡ ಸೈನ್ಯವನ್ನು ದಕ್ಷಿಣಕ್ಕೆ ಕಳುಹಿಸಿದ್ದರೂ ಶಿವಾಜಿಯ ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ.

7. ಶಿವಾಜಿಯ ಸಿಂಹಾಸನರೋಹಣ (1674)

ವಿಜಯಗಳ ನಂತರ ಸಾಮ್ರಾಜ್ಯ ಕಟ್ಟಿಕೊಂಡ ಮೇಲೆ ಶಿವಾಜಿಯು ಕ್ರಿ.ಶ,1674 ರಲ್ಲಿ ರಾಯಗಡದ ಕೋಟೆಯಲ್ಲಿ ಸಿಂಹಾಸನವನ್ನು ಅಲಂಕರಿಸಿ "ಛತ್ರಪತಿ" ಎಂಬ ಬಿರುದನ್ನು ಪಡೆದನು. "ಗೋ ಬ್ರಾಹ್ಮಣ ಪ್ರತಿಪಾಲಕ" ಎಂದು ಶಿವಾಜಿಯನ್ನು ಘೋಷಿಸಲಾಯಿತು.

8. ಶಿವಾಜಿಯ ಕರ್ನಾಟಕದ ಮೇಲೆ ದಾಳಿಗಳು.(1677)

ಶಿವಾಜಿಯು ದಕ್ಷಿಣ ಭಾರತದ ಮೇಲೂ ಅದರಲ್ಲಿ ಕರ್ನಾಟಕದ ಕೂಲಿ, ಕರ್ನೂಲ್, ಜಿಂಜಿ, ವೆಲ್ಲೂರ, ತಂಜಾವೂರ, ಮಧುರೈ, ಕಾರವಾರ, ಅಂಕೋಲ, ಹುಬ್ಬಳ್ಳಿ, ಲಕ್ಷ್ಮೇಶ್ವರ, ಕೊಪ್ಪಳ ಮತ್ತು ಶ್ರೀರಂಗಪಟ್ಟಣಗಳ ಮೇಲೆ ದಾಳಿ ಮಾಡಿ ಅಪಾರ ಸಂಪ[ತ್ತನ್ನು ಲೂಟಿ ಮಾಡಿದನು. ಕೇಲವು ಪ್ರದೇಶಗಳನ್ನು ಗೆದ್ದು ಮಲಸಹೋದರನಾದ ಬೆಂಗಳೂರಿನ ಏಕೋಜಿಗೆ ನೀಡಿದನು. ಯಾದವಿ ಕಲಹದಲ್ಲಿ ಕೆಳದಿಯ ರಾಣಿಯಾದ ಚೆನ್ನಮ್ಮ ಳಿಗೆ ನೆರವು ನೀಡಿದನು.

9 ಶಿವಾಜಿಯ ಆಡಳಿತ ಪದ್ದತಿ.

10. ಕೊನೆಯ ದಿನಗಳು ಮತ್ತು ಮರಣ.1680

11. ವ್ಯಕ್ತಿತ್ವ ಮತ್ತು ವಿಮರ್ಶೆ

**ಛತ್ರಪತಿ ಶಿವಾಜಿ**

ಪ್ರಜಾಹಿತ ರಕ್ಷಕ, ಹಿಂದುತ್ವ ರಕ್ಷಕ, ರಾಷ್ಟ್ರಪ್ರೇಮಿ, ನ್ಯಾಯವಂತ, ಸುಸಜ್ಜಿತ ನೌಕಾದಳ ಮತ್ತು ರ್ತವ್ಯ ದಕ್ಷ, ರ್ಮಶ್ರದ್ಧೆ ಮತ್ತು ಭಾಷಾ ಶುದ್ಧಿಯನ್ನು ಪುರಸ್ಕರಿಸುವ ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ರ್ಮಕ್ಕೆ ರಾಜಸಿಂಹಾಸನ ದೊರಕಿಸಿಕೊಟ್ಟಿದ್ದು ಅವಿಸ್ಮರಣೀಯ. ಶಿಸಾಮ್ರಾಜ್ಯ ತನಗಾಗಿ ಅಲ್ಲ. ರ್ಮಕ್ಕಾಗಿಷಿ ಎಂಬುದು ಶಿವಾಜಿಯ ವಾದ. ಶತ್ರುವನ್ನು ಸರಿಯಾಗಿ ಗ್ರಹಿಸಿ ತಕ್ಕಪಾಠ ಕಲಿಸಿದವನು ಶಿವಾಜಿ. ಕತ್ತಿಗೆ ಕತ್ತಿ ಇವನ ಸೂತ್ರವಾಗಿತ್ತು. ದಿ.23 ರಂದು ಶಿವಾಜಿ ಜಯಂತಿ ಆಚರಣೆಯ ನಿಮಿತ್ತ ಈ ಲೇಖನ.

ಕ್ರಿ.ಶ. 1627 ರಲ್ಲಿ ಶಿವಾಜಿಯು ಪುಣೆಯ ಶಿವನೇರಿ ದರ್ಗ ಎಂಬಲ್ಲಿ ಜನಿಸಿದನು. ಇವರ ತಂದೆ ಷಾಜಿ ಭೋಂಸ್ಲೆ. ತಾಯಿ ಜೀಜಾಬಾಯಿ. ಇವನ ತಂದೆಯು ಬಿಜಾಪುರ ಸುಲ್ತಾನನ ಬಳಿ ಉನ್ನತ ಹುದ್ದೆಯಲ್ಲಿರುದ್ದರಿಂದ ತಾಯಿ ಜೀಜಾಬಾಯಿ ಇವನ ಭವಿಷ್ಯ ರೂಪಿಸಿದರು. ಅವಳು ಶಿವಾಜಿಗೆ ಜೀವನ ಮೌಲ್ಯಗಳ ಶಿಕ್ಷಣವನ್ನಿತ್ತಳು. ಶಿವಾಜಿಯ ಗುರು ದಾದಾಜಿ ಕೊಂಡದೇವ ಶಸಾ್ತ್ರಸ್ತ್ರ ವಿದ್ಯೆ ಕಲಿಸಿ, ತರುಣ ವೀರನ ಮನಸ್ಸನ್ನು ಜಾಗೃತಗೊಳಿಸಿದರು. ಹಿಂದೂರ್ಮ ಪುನರುಜ್ಜೀವನಗೊಳಿಸಬೇಕು, ಶಿಹೈಂಧವೀ ಸ್ವರಾಜ್ಯ ಶಿಕಟ್ಟಬೇಕೆಂಬ ಆಕಾಂಕ್ಷೆಯಿಂದ ಮರಾಠ ಮುಖಂಡರನ್ನು ಮತ್ತು ಪಶ್ಚಿಮ ಘಟ್ಟಗಳ ಮಾವಳರೆಂಬ ದೃಢಕಾಯದ ಗಿರಿಜನರನ್ನು ಸೇರಿಸಿ ತರುಣರ ಪಡೆಯನ್ನು ಕಟ್ಟಿದನು. ಶಿವಾಜಿಯು ಸಂತ ರಾಮದಾಸರ ಪರಮ ಭಕ್ತನಾಗಿದ್ದನು. ಬಾಲಕನಾಗಿದ್ದಾಗ ಶಿವಾಜಿಯು ಕೆಲವು ದಿನ ಬೆಂಗಳೂರಿನಲ್ಲಿ ತನ್ನ ತಂದೆಯ ಜಹಗೀರಿನಲ್ಲಿ ನೆಲೆ ನಿಂತಿದ್ದನು. ವಿಜಯನಗರದ ಮಾಂಡಲಿಕ ಕೆಂಪೇಗೌಡರ ರಾಜ್ಯ ಷಾಜಿಯ ವಶಕ್ಕೆ ಬಂದಿತ್ತು.

ದೇವಿ ಅಂಭಾಭವಾನಿಯಿಂದ ಅನುಗ್ರಹಿತನಾಗಿದ್ದ ಶಿವಾಜಿಯು ಶಸಾ್ತ್ರಸ್ತ್ರಗಳಲ್ಲಿ ಅಪ್ರತಿಮ ವೀರನಾಗಿದ್ದನು. ಅವನು ತನ್ನ 19ನೇ ವಯಸ್ಸಿನಲ್ಲಿ ತೋರಣದರ್ಗವನ್ನು ವಶಪಡಿಸಿಕೊಂಡು, ನಂತರ ರಾಯಗಡ (ಕ್ರಿ.ಶ 1646), ಚಾಕಣ್, ಸಿಂಹಗಡ, ಪುರಂದರಗಡವನ್ನು ವಶಪಡಿಸಿಕೊಂಡನು. ಈ ಎಲ್ಲಾ ಪ್ರದೇಶಗಳೂ ಬಿಜಾಪುರ ಸುಲ್ತಾನರ ಸುಲ್ತಾನ ಸಾಮ್ರಾಜ್ಯದ

ವ್ಯಾಪ್ತಿಯೊಳಗಿತ್ತು. ಕ್ರಿ.ಶ. 1656 ರಲ್ಲಿ ಶಿವಾಜಿಯು ಕೊಂಕಣ ಪ್ರದೇಶದ ಕಲ್ಯಾಣ, ಜಾವಳಿ ಕೋಟೆಯ ಪ್ರದೇಶಗಳನ್ನು ವಶಪಡಿಸಿಕೊಂಡನು. ಶಿವಾಜಿಯ ದಾಳಿಗಳು ಬಿಜಾಪುರ ಸುಲ್ತಾನನಿಗೆ ಕೋಪ ತರಿಸಿತು. ಶಿವಾಜಿಯನ್ನು ನಿಗ್ರಹಿಸಲು ಕ್ರಿ.ಶ. 1659 ರಲ್ಲಿ ತನ್ನ ದಂಡನಾಯಕ ಅಫಜಲಖಾನನ ನೇತೃತ್ವದಲ್ಲಿ ಬಹುದೊಡ್ಡ ಸೈನ್ಯವನ್ನು ಕಳುಹಿಸಿದನು. ಪ್ರತಾಪಗಡದ ಬಳಿಯ ವಾಯಿ ಎಂಬಲ್ಲಿ ಶಿವಾಜಿಯು ಅಫ್ಜಲಖಾನ್ನನ್ನು ಮಾತುಕತೆಗೆ ಕರೆದು ಉಪಾಯದಿಂದ ಕೊಂದನು.

ಆಡಳಿತ: ಶಿವಾಜಿಯ ಆಡಳಿತದಲ್ಲಿ ಸಹಾಯ ಮಾಡಲು ಅಷ್ಟಪ್ರಧಾನರೆಂಬ ಎಂಟು ಜನ ಮಂತ್ರಿಗಳ ಒಂದು ಮಂಡಳಿಯಿದ್ದು, ಮುಖ್ಯಮಂತ್ರಿಯನ್ನು ಪೇಶ್ವೆ ಎಂದು ಕರೆಯಲಾಗುತ್ತಿತ್ತು. ಭೂಕಂದಾಯವೇ ರಾಜ್ಯದ ಪ್ರಮುಖ ಆದಾಯವಾಗಿತ್ತು. ರೈತರೇ ನೇರವಾಗಿ ತೆರಿಗೆಯನ್ನು ರ◌್ಕಾರಕ್ಕೆ ಸಲ್ಲಿಸುವ ಪದ್ಧತಿ ರೂಢಿಯಲ್ಲಿತ್ತು. ಅಧಿಕಾರಿಗಳಿಗೆ ವೇತನವನ್ನು ಹಣದ ರೂಪದಲ್ಲಿ ನೀಡಲಾಗುತ್ತಿತ್ತು. ಜಾಗೀರು ನೀಡುತ್ತಿರಲಿಲ್ಲ. ಉದ್ಯೋಗ ನೇಮಕಾತಿಯಲ್ಲಿ ರ◌್ಹತೆಯು ಮಾನದಂಡವಾಗಿತ್ತು. ಶಿವಾಜಿಯು ಕಟ್ಟುನಿಟ್ಟಿನ ಆಡಳಿತ ಪದ್ಧತಿಯನ್ನು ಜಾರಿಗೆ ತಂದಿದ್ದನು. ಶತ್ರುಗಳ ಸ್ತ್ರೀಯರನ್ನೂ ಸಹ ಗೌರವಿಸುತ್ತಿದ್ದನು.

ಮೊಘಲರ ಜೊತೆ ಸಂಬಂಧ: ಮೊಘಲರು ಶಿವಾಜಿಯನ್ನು ಸಂಪರ◌್ಣನಾಶಗೊಳಿಸಲು ಬಿಜಾಪುರದ ಬಾದಶಹನೊಂದಿಗೆ ಕೈಜೋಡಿಸಿದರು. ಕ್ರಿ.ಶ. 1660 ರಲ್ಲಿ ಔರಂಗಜೇಬನು ತನ್ನ ಸೇನಾಪತಿ ಶಯಿಸ್ತಾಖಾನನ್ನು ಶಿವಾಜಿಯನ್ನು ಸೋಲಿಸಲು ಕಳುಹಿಸಿದನು. ಶಯಿಸ್ತಾಖಾನನು ಮರಾಠರ ಕೆಲವು ಕೋಟೆಗಳನ್ನು ಹಾಗೂ ಪುಣೆಯನ್ನು ವಶಪಡಿಸಿಕೊಂಡನು. ಆಗ ಶಿವಾಜಿ ಪುಣೆಯಲ್ಲಿ ಬೀಡುಬಿಟ್ಟಿದ್ದ ಶಯಿಸ್ತಾಖಾನನ ಮೇಲೆ ರಾತ್ರಿಯ ವೇಳೆ ದಿಢೀರನೆ ದಾಳಿ ಮಾಡಿದನು. ನಂತರ ಔರಂಗಜೇಬನು ಕ್ರಿ.ಶ 1664 ರಲ್ಲಿ ತನ್ನ ಸೇನಾನಿ ರಾಜಾಜಯಸಿಂಗನನ್ನು ಶಿವಾಜಿಯನ್ನು ನಿಗ್ರಹಿಸಲು ಕಳುಹಿಸಿದನು. ಜಯಸಿಂಗನು ಶಿವಾಜಯ ಅನೇಕ ಕೋಟೆಗಳನ್ನು ವಶಪಡಿಸಿಕೊಂಡಾಗ ಆತನೊಂದಿಗೆ ಕ್ರಿ.ಶ 1665 ರಲ್ಲಿ ಶಿವಾಜಿಯು ಅನಿವಾರ್ಯವಾಗಿ ಪುರಂದರ ಒಪ್ಪಂದ ಮಾಡಿಕೊಂಡು ಆ ಪ್ರಕಾರ 24 ಕೋಟೆಗಳನ್ನು ಮೊಘಲರಿಗೆ ಬಿಟ್ಟುಕೊಟ್ಟನು.

ರಾಜಾಜಯಸಿಂಗನು ಶಿವಾಜಿಯ ಮನವೊಲಿಸಿ, ಆಗ್ರಾದಲ್ಲಿ ಔರಂಗಜೇಬನನ್ನು ಕಾಣುವಂತೆ ಮಾಡಿದನು. ಆದರೆ ಔರಂಗಜೇಬನು ಇವನನ್ನು ಸರಿಯಾಗಿ ನಡೆಸಿಕೊಳ್ಳದೇ ಸೆರೆಯಲ್ಲಿಟ್ಟನು. ಆಗ್ರಾ ಬಂದೀಖಾನೆಯಿಂದ ಬುದ್ಧಿವಂತ ಶಿವಾಜಿಯು ಉಪಾಯದಿಂದ ಪಾರಾದನು. ನಂತರ ಎರಡು ರ◌್ಷಗಳ ಕಾಲ ಶಿವಾಜಿಯು ತಾನು ಕಳೆದುಕೊಂಡಿದ್ದ ಎಲ್ಲಾ ಕೋಟೆಗಳನ್ನು ಪುನ: ವಶಪಡಿಸಿಕೊಂಡನು. ಕ್ರಿ.ಶ. 1674ರಲ್ಲಿ ರಾಯಗಡದಲ್ಲಿ ಕಿರೀಟಧಾರಣೆ ಮಾಡಿಸಿಕೊಂಡು ಶಿಛತ್ರಪತಿಷಿ ಎನಿಸಿದನು. ನಂತರ ಇಡೀ ಪಶ್ಚಿಮ ಭಾರತ ಆಡಳಿತವನ್ನು ಏಕೀಕರಿಸಿದನು. ಶಿವಾಜಿಯು ಕ್ರಿ.ಶ. 1680 ರಲ್ಲಿ ಕಾಲವಾದನು.

ಮಹಾರಾಷ್ಟ್ರದ ವಾಣಿಜ್ಯ ನಗರಿಯಾದ ಕೊಲ್ಲಾಪುರದಲ್ಲಿ ಅವರು ಬಳಸುತ್ತಿದ್ದರೆನ್ನಲಾದ ಶಸಾ್ತ್ರಸ್ತ್ರಗಳನ್ನು ವಸ್ತು ಸಂಗ್ರಹಾಲಯ ನರ◌್ಮಿಸಿ ಇಂದಿಗೂ ಕೂಡ ಜನಸಾಮಾನ್ಯರವೀಕ್ಷಣೆಗೆ ಕಾಯ್ದಿರಿಸಲಾಗಿದೆ.

ಇಂದು ದೇಶದಲ್ಲಿ ಭಯೋತ್ಪಾದಕರ ಉಪಟಳ ಹೆಚ್ಚಾಗಿದ್ದು, ದೇಶದ ಸುಭದ್ರತೆ, ರಕ್ಷಣೆಗೆ ಒಂದಾಗಿ, ಭಯೋತ್ಪಾದಕತೆ ವಿರುದ್ಧ ಹೋರಾಡೋಣ. ಶಿವಾಜಿಯ ತತ್ವಗಳು, ಅವನಲ್ಲಿಯ ರಾಷ್ಟ್ರ ಪ್ರೇಮದ ಗುಣ ಇಂದಿನ ಯುವಪೀಳಿಗೆಗೆ ದಾರಿದೀಪವಾಗಲಿ. ಸನಾತನ ರ◌್ಮದ ಜ್ಯೋತಿ ವಿಶ್ವದಲ್ಲೆಡೆ ಬೆಳಗಲಿ.